ಮಾಡುತ್ತಿರಬಹುದು. ಫೋನ್ ಎತ್ತಿದರೆ ನನ್ನ ಕೆಂಪು ಸೀರೆಯ ಮ್ಯಾಚಿಂಗ್ ಬ್ಲೌಸ್ ಕಾಣಿಸುತ್ತಿಲ್ಲವೆಂದು, ನನ್ನ ಹಣಿಗೆಯನ್ನು ನೋಡಿದೆಯಾ ಎಂದು... ಇಂತಹ ಮಾತುಗಳನ್ನಾಡಿ ಫೋನ್ ಇಟ್ಟುಬಿಡುತ್ತಾಳೆ. ಹೌದು ಅಮ್ಮ ನನ್ನನ್ನು 'ಎಲ್ಲಿದ್ದಿಯಾ' ಎಂದು ಕೇಳದೇ ಹೋಗಲಿಕ್ಕೆ ನನ್ನ ವರ್ತನೆಯೂ ಒಂದು ಕಾರಣವೇನೋ.

ಅಮ್ಮ ಹೀಗೆ ನಡೆದುಕೊಳ್ಳಲಿಕ್ಕೆ ಕಾರಣವಾದ ಆ ದಿನ ನನಗೆ ಇನ್ನೂ ನೆನಪಿದೆ.

ನನ್ನ ಮೇಲೆ ಅತ್ಯಾಚಾರ ನಡೆದು ಕೆಲವು ದಿನಗಳಾದ ಮೇಲೆ ಒಂದು ದಿನ ಸಾಯಂಕಾಲ ಮನೆಯಿಂದ ಹೊರಬೀಳುತ್ತಿದ್ದಂತೆ "ಬೇಗ..." ಅಮ್ಮನ ಮಾತು ಬಾಯಲ್ಲಿಯೇ ಉಳಿದುಬಿಟ್ಟವು. ಯಾಕೆಂದು ಹಿಂದಕ್ಕೆ ತಿರುಗಿ ನೋಡಿದರೆ ಟೀವಿ. ನೋಡುತ್ತಿದ್ದ ಅಪ್ಪ ಮಾತಾಡಬೇಡವೆಂದು ಕಣ್ಣಿಂದ ಕೈಗಳಿಂದ ಸನ್ನೆ ಮಾಡುತ್ತಿದ್ದಾರೆ. ಅಮ್ಮನೆಡೆ ನೋಡಿದೆ. ಮಾತಾಡಬಾರದ್ದೇನೋ ಮಾತಾಡಿದಂತೆ ತಪ್ಪಿತಸ್ಥ ಭಾವನೆ ಆಕೆಯ ಕಣ್ಣುಗಳಲ್ಲಿ.

ಇದಕ್ಕೂ ಮುನ್ನ ಮನೆಯಿಂದ ಯಾವಾಗ ಹೊರಬಿದ್ದರೂ ಅಮ್ಮ ಅಥವಾ ಅಪ್ಪ 'ಈಗೆಲ್ಲಿಗೆ... ಈಗ್ಯಾಕೆ' ಎಂದು ಕೇಳುತ್ತಿದ್ದರು. ಮಕ್ಕಳನ್ನು ಬೇಗ ಮನೆಗೆ ಬಂದು ಸೇರಿಕೊಳ್ಳಿರೆಂದು ಹೇಳುವ ಆ ಸಲುಗೆ ಈಗೇನಾಯಿತು. ಜವಾಬ್ದಾರಿಯಿಂದ, ಕಕ್ಕುಲತೆಯಿಂದ, ಯಜಮಾನಿಕೆಯಿಂದ ನೀಡುತ್ತಿದ್ದ ಆ ಎಚ್ಚರಿಕೆಗಳು ಈಗೇನಾದವು. ಸೆನ್ಸಾರ್, ಎಲ್ಲಾ ಸೆನ್ಸಾರ್. ನನ್ನ ಜೀವನದ ಸಿನಿಮಾಕ್ಕೆ ಕೊನೆಗಾದರೂ 'ಯು' ಸರ್ಟಿಫಿಕೇಟ್ ದೊರೆಯಬಹುದೆ?

"ಏನೂ ಇಲ್ಲಮ್ಮ... ನಿಮ್ಮಮ್ಮನಿಗೆ ಸ್ವಲ್ಪ ಟೆನ್ಶನ್ ಜಾಸ್ತಿಯಲ್ಲವೆ" ಎಂದಿದ್ದರು ಅಪ್ಪ.

"ಅಪ್ಪಾ! ನೀವೆಲ್ಲ ನನ್ನೊಂದಿಗೆ ಸಹಜವಾಗಿ ಇರಲಾರಿರಾ. ನನ್ನನ್ನೇಕೆ ಹೀಗೆ ಸ್ಪೇಷಲ್ ಆಗಿ ಟ್ರೀಟ್ ಮಾಡ್ತಿದ್ದೀರಿ. ನಾನು ನಿಮ್ಮ..." ಅನ್ನುತ್ತ ಅಪ್ಪನನ್ನು ಗಟ್ಟಿಯಾಗಿ ತಬ್ಬಿಕೊಂಡು ಬಿಕ್ಕಿಬಿಕ್ಕಿ ಅತ್ತಿದ್ದೆ.

"ಅಯ್ಯೋ!... ಇದೇನಿದು. ಅಂತ ದೊಡ್ಡ ಕ್ರೈಸಸ್‌ನಲ್ಲಿಯೂ ಸಹ ಅತ್ತಿಲ್ಲವಲ್ಲ. ಎಲ್ಲವನ್ನೂ ಇಷ್ಟು ಧೈರ್ಯವಾಗಿ ಎದುರಿಸಿದ ನೀನು ಈಗ ಹೀಗೇಕೆ" ಎನ್ನುತ್ತ ಅಮ್ಮ ನನಗೆ ಧೈರ್ಯ ಹೇಳಿದ್ದಳು.

"ಸಾರಿ, ನಾವು ಮೊದಲಿನಂತೆಯೇ ಇರುತ್ತೇವೆ. ನಮ್ಮನ್ನು ನಂಬು, ಪ್ಲೀಸ್!" ಎನ್ನುತ್ತಿದ್ದಂತೆ ಅಪ್ಪನ ಕಣ್ತುಂಬ ನೀರು. ಆದರೆ, ಎಷ್ಟೇ ಪ್ರಯತ್ನಿಸಿದರು ಅವರು ಮೊದಲಿನಂತೆ ನನ್ನೊಂದಿಗೆ ಇರಲಾಗಲಿಲ್ಲ.

ಆನಂತರ ಮತ್ತೊಮ್ಮೆ ಒಂದು ದಿನ ಸಾಯಂಕಾಲ ಏಳು ಗಂಟೆಗೆ ಮನೆ ಬಿಟ್ಟೆ. ಅಪ್ಪ ಟೀವಿ. ನೋಡುತ್ತಿದ್ದರು. ಆಗ ಆ ಕಾಲೋನಿಯಲ್ಲಿರುವ ನೀಮ್‌ಪಾರ್ಕ್ ವರೆಗೂ ಹೋಗುವುದು ಅಲ್ಲಿದ್ದ ಚಾಟ್ ಗಾಡಿಯ ಮೇಲೆ ಚಾಟೋ, ಐಸ್‌ಕ್ರೀಮೋ ತಿಂದು ಬರುವಾಗ ಮನೆಯವರಿಗೂ ಚಾಟೋ, ಐಸ್‌ಕ್ರೀಮೋ ಪಾರ್ಸಲ್ ಮಾಡಿಸಿಕೊಂಡು ಪೂಜೆಗೆ ಹೂಗಳನ್ನು ಕೊಂಡುತರುವುದು ಇದೆಲ್ಲಾ ಮಾಮೂಲೆ. ಆದರೆ, ಆ ಘಟನೆಯ ನಂತರ ನಾನು ಕಾಲು ಹೊರಗಿಟ್ಟರೆ ಸಾಕು ಮನೆಯವರಿಗೆ ಆತಂಕ ಶುರುವಾಗಿಬಿಡುತ್ತದೆ.

"ಈಗೆಲ್ಲಿಗೆ? ಒಬ್ಬಳೇ ಎಲ್ಲಿಗೆ? ನೀ ಹೋಗುವುದು ಬೇಡ. ಬುಜ್ಜಮ್ಮ ಮ್ಯೂಸಿಕ್ ಕ್ಲಾಸ್‌ನಿಂದ ಬಂದ ಮೇಲೆ ಅವಳನ್ನು ಜೊತೆಗೆ ಕರೆದುಕೊಂಡು ಹೋಗುವೆಯಂತೆ" ಎಂದಿದ್ದಳು ಅಮ್ಮ.

ತಂಗಿಯ ರಕ್ಷಣೆಯಲ್ಲಿ ಹೋಗುವಂತೆ ಹೇಳಿತ್ತಿರುವ ಅಮ್ಮನ ಮುಗ್ಧತೆಗೆ ನಿಟ್ಟುಸಿರು ಬಿಡುತ್ತಾ "ಇಲ್ಲಿಯೇ ತಾನೆ, ಪಾರ್ಕ್‌ವರೆಗೆ ಅಮ್ಮ" ಎಂದೆ.